**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.453/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಹರೀಶ್ | ಡಿಡಬ್ಲ್ಯೂ-1 |
| ತಂದೆಯ ಹೆಸರು | : ನಾರಾಯಣ | |
| ವಯಸ್ಸು | : 36 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 30.10.2025 |
| ವಾಸಸ್ಥಳ | : ಜೇನುಗದ್ದೆ | |

**<u>:ಮುಖ್ಯ ವಿಚಾರಣೆಃಶ್ರೀ ಕೆ.ಆರ್.ಹೆಚ್. ವಕೀಲರಿಂದ:</u>**

ನನ್ನ ಮತ್ತು ಪಿರ್ಯಾದುದಾರರ ಮಧ್ಯೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ. ವ್ಯವಹಾರ ನಡೆದಿರುವುದು ನನ್ನ ಮತ್ತು ಪಿರ್ಯಾದುದಾರರ ಗಂಡನ ನಡುವೆ. ನನ್ನ ಮತ್ತು ರವಿ ಎಂಬುವವರ ನಡುವೆ ಅಡಿಕೆ ವ್ಯವಹಾರದ ಬಾಬ್ತು ರೂ.40,000/- ಹಣವನ್ನು ರವಿ ಎಂಬುವವರಿಂದ ಸಾಲವಾಗಿ ಪಡೆದುಕೊಂಡಿರುತ್ತೇನೆ. ಸದರಿ ಹಣದ ಬಾಬ್ತು ನಾನು ರವಿ ಎಂಬುವವರಿಗೆ ನನ್ನ ಹೆಸರಿನ ಕಡಬಗೆರೆ ಶಾಖೆಯ ಕರ್ನಾಟಕ ಬ್ಯಾಂಕ್ ನ ಚೆಕ್ ನಂಬರ್ 337130 ರ ಚೆಕ್ ನ್ನು ನೀಡಿರುತ್ತೇನೆ. ನಂತರ ನನ್ನ ಮತ್ತು ರವಿ ಎಂಬುವವರ ನಡುವೆ ಅಡಿಕೆ ವ್ಯವಹಾರದ ಬಾಬ್ತು ಇತ್ಯರ್ಥವಾದ ನಂತರ ಸದರಿ ರವಿಯವರು ನಾನು ನೀಡಿದಂತಹ ಚೆಕ್ ನ್ನು ಹಿಂತಿರುಗಿಸಿರುವುದಿಲ್ಲ. ನಂತರದಲ್ಲಿ ಸದರಿ ಚೆಕ್ ನ ಬಾಬ್ತು ನನಗೆ ಯಾವುದೇ ನೋಟೀಸು ಜಾರಿಯಾಗಿರುವುದಿಲ್ಲ, ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ ನಂತರ ಸಮನ್ಸ್ ಜಾರಿ ಮಾಡಿದ ಸಮಯದಲ್ಲಿ ನನಗೆ ತಿಳಿದು ಬಂದಿರುತ್ತದೆ. ಇದನ್ನು ಹೊರತುಪಡಿಸಿ ಇನ್ಯಾವುದೇ ವಿಚಾರ ನನಗೆ ತಿಳಿದಿರುವುದಿಲ್ಲ.

**<u>ಪಾಟೀ ಸವಾಲಿಗೆ ಪಿರ್ಯಾದುದಾರರ ವಕೀಲರು ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.